ನಾನು ಮಾಡಿಕೊಂಡದ್ದು ಇಷ್ಟೆ ಅಲಂಕಾರ. ಆದರೆ ಲಿಪ್‌ಸ್ಟಿಕ್ ಸ್ವಲ್ಪ ಢಾಳಾಗಿ ಹಚ್ಚಿಕೊಂಡಿದ್ದೆ. ನನ್ನ ನಾದಿನಿಯರು ಅದನ್ನು ನೋಡಿ ಇರುಸುಮುರುಸಾಗಿ ಅದನ್ನು ಒರೆಸಿಕೊಳ್ಳಲು ಹೇಳಿದರು. ಲಿಪ್‌ಸ್ಟಿಕ್ ಹಚ್ಚಿಕೊಂಡು ಅಪರಾಧ ಮಾಡಿದೆನಾ ಅಂತ ಅಂಜಿ ಅದನ್ನು ಒರೆಸಿಕೊಂಡು ಮದುವೆ ಮಂಟಪಕ್ಕೆ ಹೋಗಿದ್ದೆ. ಕಾಲದೊಂದಿಗೆ ಎಲ್ಲರ ಮನೋಭಾವಗಳು ಬದಲಾಗಿ ಈಗ ನೆನೆಸಿಕೊಂಡು ನಗುತ್ತೇವೆ.

ನಾನು ದೂರದರ್ಶನದ ಚಂದನ ವಾಹಿನಿಗೆ ನಿರೂಪಕಿಯಾಗಿ ಕೆಲಸ ಮಾಡುತ್ತಿದ್ದಾಗ ಅಲ್ಲಿ ಸಂದರ್ಶಕರಿಗೆ ಮೊದಲು ಹೇಳುವುದೇ ಮೇಕಪ್ ಮಾಡಿಕೊಳ್ಳಬೇಕೆಂಬುದು. ಗಂಡಸರು ಮೇಕಪ್‌ಗೆ ನಿರಾಕರಿಸುತ್ತಿದ್ದರು. ಆದರೆ ಕ್ಯಾಮೆರಾ ಮೇಕಪ್ ಇಲ್ಲದ ಮುಖ ಟೀವಿಯಲ್ಲಿ ಹೇಗೆ ತೋರಿಸುತ್ತದೆ ಎಂದು ತಿಳಿಸಿ ಹೇಳಿದ ಮೇಲೆ ಒಪ್ಪಿಕೊಳ್ಳುತ್ತಿದ್ದರು.

ನನ್ನ ಮದುವೆಯಲ್ಲಿನ ವಿಡಿಯೊ ನೋಡಿದರೆ ನಗು ಬರುತ್ತದೆ. ಎಲ್ಲರದೂ ಮೇಕಪ್ ಇಲ್ಲದ ಮುಖಗಳು. ಕಣ್ಣಿನ ಕೆಳಗೆ ಕಪ್ಪು ಇರದವರ ಕಣ್ಣಿನ ಕೆಳಗೂ ಕಪ್ಪು ಕಪ್ಪು. ಇದು ನಾವೇನಾ ಎನ್ನುವಷ್ಟು ಅಚ್ಚರಿ ಆಗುತ್ತದೆ ಈಗ ನೋಡುವಾಗ. ಕ್ಯಾಮೆರಾದ ಮುಂದೆ ನಿಲ್ಲುವಾಗ ಮೇಕಪ್ ಮಾಡಿಕೊಳ್ಳಲೇಬೇಕು ಎಂಬ ಸತ್ಯದ ಅರಿವಾದದ್ದು ನಾನು ಚಂದನ ವಾಹಿನಿಗೆ ಕೆಲಸ ಮಾಡುವ ಸಂದರ್ಭದಲ್ಲಿ. ಮುಖಕ್ಕೆ ಪೌಡರ್ ಬಳಿದು ತುಟಿಗೆ ಲಘುವಾಗಿ ಕೆಂಪು ಬಳಿದು ಶೂಟಿಂಗ್‌ಗೆ ರೆಡಿಯಾದ ಗಂಡುಮಕ್ಕಳನ್ನು ನೋಡಿ ನಗು ಬರುತ್ತಿತ್ತು. ಅವರೂ ಮುಜುಗರಪಡುತ್ತಿದ್ದರು. ಕ್ಯಾಮೆರಾ ಮುಂದೆ ನಿಲ್ಲಬೇಕಾದರೆ ಇವೆಲ್ಲ ಅನಿವಾರ್ಯ. ಇಲ್ಲದಿದ್ದರೆ ಸ್ಕ್ರೀನ್‌ನಲ್ಲಿ ನಮ್ಮನ್ನು ನಾವು ನೋಡಿಕೊಂಡು ಮುಜುಗರಪಡಬೇಕಾಗುತ್ತದೆ.

ಆಧುನಿಕ ಯುಗದಲ್ಲಿ ಪ್ರಸಾಧನದ ಉದ್ಯಮ ವೇಗವಾಗಿ ಬೆಳೆಯುತ್ತಿದೆ. ಮೇಕಪ್‌ನ ವಿವಿಧ ಬ್ರ್ಯಾಂಡ್‌ಗಳು ದಿನಕ್ಕೊಂದರಂತೆ ಮಾರುಕಟ್ಟೆಗೆ ಲಗ್ಗೆ ಇಡುತ್ತಿವೆ. ಅದರ ಜಾಹೀರಾತುಗಳಿಂದ ಪ್ರಭಾವಿತರಾಗುವ ಯುವಜನತೆ, ದೇಶ ವಿದೇಶಗಳ ಬ್ರ್ಯಾಂಡ್‌ಗಳ ಮೋಹ. ಅವುಗಳ ಬೆಲೆ ಕೇಳಿ ತಲೆ ಗಿರಗಿರ ತಿರುಗುವುದೊಂದು ಬಾಕಿ. ಈಗ ಅಲಂಕಾರ ಎನ್ನುವುದು ಹೆಣ್ಣು ಮಕ್ಕಳ ವಿಶೇಷಣವಾಗಿ ಮಾತ್ರ ಉಳಿದಿಲ್ಲ. ಗಂಡು ಮಕ್ಕಳು ಕೂಡ ಮೇಕಪ್ ಮೋಹಕ್ಕೆ ಹೊರತಾಗಿಲ್ಲ. ಮದುವೆಗಳಲ್ಲಿ ಮದುಮಗಳ ಮೇಕಪ್‌ಗೆ ಕಡಿಮೆ ಎಂದರೆ ಇಪ್ಪತ್ತರಿಂದ ಐವತ್ತು ಸಾವಿರ ಮೇಕಪ್ ಚಾರ್ಜ್ ಪಡೆಯುವ ಬ್ಯೂಟಿಷಿಯನ್‌ಗಳಿರುವರು. ಮದುಮಗಳ ಉಂಗುಷ್ಟದಿಂದ ನೆತ್ತಿಯವರೆಗೂ ಅಲಂಕಾರ, ಅವರ ಸಂಭಾವನೆ ಅವರು ಮಾಡುವ ಮೇಕಪ್‌ನ ಬ್ರ್ಯಾಂಡ್ ಮೇಲೆ. ಸುಮಾರು ಮೂರು ತಾಸು ಅವರಿಗೆ ಮುಖ ಒಡ್ಡಿ ಕುಳಿತುಕೊಳ್ಳಬೇಕು. ಮೇಕಪ್ ಮುಗಿದ ಮೇಲೆ ಕಣ್ಣು, ಕಿವಿ, ಮೂಗು, ಕೂದಲು ಎಲ್ಲವೂ ಬದಲು, ಇದು ನಾವೇನಾ ಎಂಬ ಆಶ್ಚರ್ಯ, ಅಷ್ಟೊಂದು ಚಹರೆ ಬದಲಿಸುವ ಕಲೆ ಮೇಕಪ್‌ಗೆ ಇದೆ ಎಂದರೆ ನೀವು ನಂಬಬೇಕು. ದೇವಾನುದೇವತೆಗಳ ಚಿತ್ರಗಳನ್ನೆಲ್ಲ ಸುಂದರವಾಗಿ ರಚಿಸಿದ ಕಲಾವಿದರು, ಸೌಂದರ್ಯವನ್ನು ವರ್ಣಿಸುವ ಕವಿಗಳು, ಸೌಂದರ್ಯವನ್ನು ಆರಾಧಿಸುವ ಆರಾಧಕರು ಇರುವಾಗ, ಮನುಷ್ಯ ಸುಂದರವಾಗಿ ಕಾಣಬೇಕು ಎಂದು ಬಯಸುವುದು ಸಹಜವೇ ಅಲ್ಲವೇ?

ಆದರೆ ಈ ಮೇಕಪ್ ಮಾಡಿಕೊಂಡ ಮುಖ ಸ್ಕ್ರೀನ್‌ನಲ್ಲಿ ಎಷ್ಟು ಚೆನ್ನಾಗಿ ಬರುವುದೋ ವಾಸ್ತವದಲ್ಲಿ ನೋಡಿದಾಗ ಗಾಬರಿ ಬೀಳುವಂತೆ ಕಾಣುತ್ತದೆ. ಮುಖದ ತುಂಬಾ ರಂಗು, ಕಣ್ಣು ತುಟಿ ಕೆನ್ನೆಗಳೆಲ್ಲ ರಂಗುಮಯ. ಅತಿಯಾಗಿ ಮೇಕಪ್ ಮಾಡಿಕೊಂಡವರನ್ನು ಸಮೀಪದಿಂದ ನೋಡಿದಾಗ ಮೇಕಪ್ ನಿಜಾಂಶ ತಿಳಿಯುತ್ತದೆ. ಮುಖವನ್ನಷ್ಟೇ ಬೆಳ್ಳಗೆ ಮಾಡಿಕೊಂಡರೆ ಕೈಗಳಿಗೇನು ಮಾಡುವುದು, ಸಿನಿತಾರೆಯರು ಕೈ ಕಾಲಿಗೆಲ್ಲ ಬಣ್ಣ ಬಳಿದುಕೊಳ್ಳಬಹುದು. ಸಾಮಾನ್ಯರು ಹಾಗೆ ಮಾಡಲಾಗದು.

ಪಾರ್ಲರ್‌ನವರು ಮುಖಕ್ಕಿಷ್ಟು ಮೇಕಪ್ ಮಾಡಿ ಬಿಟ್ಟಾಗ ಚರ್ಮದ ನಿಜಾಂಶ ಕೈಗಳು ಸಾರದೆ ಇರವು. ಈಗ ಮುಖ ನೋಡಿ ಮಣೆ ಹಾಕುವ ಕಾಲವಾದ್ದರಿಂದ ನಾವೂ ಮುಖಕ್ಕೆ ಮಾತ್ರ ಪ್ರಾಮುಖ್ಯತೆ ಕೊಡುತ್ತೇವೆ.

ಒಂದು ಮುಖಕ್ಕೆ ಮೇಕಪ್ ಮಾಡುವಾಗ ಏನಿಲ್ಲವೆಂದರೂ ಇಪ್ಪತ್ತರಿಂದ ಮೂವತ್ತು ನಮೂನೆಯ ಪ್ರಸಾಧನಗಳ ಸಾಧನ ಬಳಸುತ್ತಾರೆ. ಕ್ಲೀನಿಂಗ್, ಪ್ರೈಮರ್, ಫೌಂಡೇಷನ್, ಪೌಡರ್, ಕಾಜಲ್, ಐಬ್ರೋ, ಐ ಲೈನರ್, ಐ ಶ್ಯಾಡೋ, ಲಿಪ್ ಲೈನರ್, ಲಿಪ್‌ಸ್ಟಿಕ್, ಲಿಪ್ ಗ್ಲೌಸ್, ಚೀಕ್‌ರೋಸ್ ನೆನಪಿಗೆ ಬಂದಷ್ಟು ಮಾತ್ರ ಹೆಸರಿಸಿರುವೆ. ಇನ್ನೂ ಅನೇಕಾನೇಕ ಕ್ರೀಮ್‌ಗಳು ಉಪಯೋಗಿಸಿದಾಗ ಒಂದು ಪರಿಪೂರ್ಣ ಮೇಕಪ್ ಆಗುತ್ತದೆ. ನೀರು ಹತ್ತಿದರೂ ಅಳಿಸದ ವಾಟರ್‌ಪ್ರೂಫ್ ಮೇಕಪ್, ತ್ರೀ ಡಿ ಮೇಕಪ್, ಹರ್ಬಲ್ ಮೇಕಪ್ ಇನ್ನೂ ಎಷ್ಟೋ ವಿಧಗಳಿವೆ.

ಎವರೆಸ್ಟ್ ಹತ್ತುವಾಗ ಇರುವುದಕ್ಕಿಂತ ಇಳಿಯುವಾಗ ಹೆಚ್ಚು ಶ್ರಮ ವಹಿಸಬೇಕಾಗುತ್ತದಂತೆ. ಹಾಗೆ ಮೇಕಪ್ ಮಾಡಿಕೊಂಡಾದ ಮೇಲೆ ಅದನ್ನು ಅಳಿಸಲು ಹರಸಾಹಸ ಮಾಡಬೇಕಾಗುತ್ತದೆ. ಹೇರ್‌ಸ್ಟೈಲ್ ಮಾಡುವಾಗ ತಲೆಯಲ್ಲಿ ಎಲ್ಲೆಂದರಲ್ಲಿ ಚುಚ್ಚಿದ ಪಿನ್ನುಗಳು ಕೂದಲುಗಳಲ್ಲೆಲ್ಲ ಸಿಕ್ಕಿ ಬಿದ್ದ ಪಿನ್ನುಗಳೊಂದಿಗೆ ಒಂದಷ್ಟು ಕೂದಲಿನ ಬಲಿ ಕೊಡಬೇಕಾಗುತ್ತದೆ. ಮುಖಕ್ಕೆ ಒರೆಸಲಾದ ಬಣ್ಣ ಹೋಗಲಾಡಿಸಲು ಅದಕ್ಕೆ ಬೇರೆ ದ್ರಾವಣ ಹಚ್ಚಿಕೊಳ್ಳಬೇಕು. ಕಣ್ಣಿಗೆ ಹಚ್ಚಿದ ಕಾಡಿಗೆ ಚದುರಿ ನಮ್ಮ ಮುಖ ನಾವೇ ನೋಡಿಕೊಂಡು ಅಂಜುವುದೊಂದು ಬಾಕಿ. ಆದರೂ ಮತ್ತೆ ಮತ್ತೆ ಮೇಕಪ್ ಮಾಡಿಕೊಳ್ಳುವ ಹಂಬಲವಂತೂ ನಮ್ಮಿಂದ ದೂರ ಮಾಡಲಾಗದು.

ಈಗ ನಾವು ಚೆನ್ನಾಗಿ ಕಾಣಬೇಕೆಂಬ ಹಂಬಲಕ್ಕೆ ಮೇಕಪ್ ಎಂಬ ಮಾಯಾವಿ ಒಂದೇ ಸಹಕಾರಿ ಎಂಬ ನಮ್ಮ ತಿಳಿವಳಿಕೆ ದೂರ ಮಾಡುವಂತೆ **AI** (ಅದು **artificial intelligence**) ಎಂಬ ತಂತ್ರಜ್ಞಾನವೂ ನಮ್ಮನ್ನು ಸುತ್ತುವರೆದಿದೆ. ಅದು ನಾವು ಹೇಗೆ ಕಾಣಬೇಕೆಂದು ಬಯಸುತ್ತೇವೋ ಹಾಗೆ ನಮ್ಮನ್ನು ತೋರಿಸುತ್ತದೆ. ಯಾವುದೇ ಮೇಕಪ್ ಮಾಡಿಕೊಳ್ಳದೆ, ದುಡ್ಡು ಕೊಟ್ಟು ವಸ್ತ್ರಗಳನ್ನು ತಂದು ಧರಿಸದೆ, ಮುಖಕ್ಕೆ ಮೇಕಪ್ ಮಾಡಿಕೊಳ್ಳದೆಯೇ ನಮ್ಮನ್ನು ಸುಂದರವಾಗಿ ಕಾಣುವಂತೆ ತೋರಿಸುತ್ತದೆ. ಇಂತಹ ತಂತ್ರಜ್ಞಾನ ಸಮಾಜಕ್ಕೆ ಉಪಯೋಗವಾಗುವುದಕ್ಕಿಂತ ಮಾರಕವಾಗುತ್ತಿರುವುದೇ ಹೆಚ್ಚು. ನಮ್ಮ ಸೌಂದರ್ಯದ ವ್ಯಸನಕ್ಕನುಗುಣವಾಗಿ ಕ್ಯಾಮೆರಾಗಳು ಆಧುನಿಕ ತಂತ್ರಜ್ಞಾನದಿಂದ ನಮ್ಮ ಮುಖ ಇರುವುದಕ್ಕಿಂತ ಸುಂದರವಾಗಿ ತೋರಿಸುತ್ತವೆ. ಮುಖದ ಮೇಲಿರುವ ಕಲೆ, ಕಪ್ಪು, ಚುಕ್ಕೆ ಎಲ್ಲವನ್ನೂ ಅಳಿಸಿ ಬೆಳ್ಳಗೆ ಹೊಳೆಯುವ ಮುಖದ ಚಿತ್ರಗಳನ್ನು ನೋಡಿ ಪದೇ ಪದೇ ಪಟ ತೆಗೆಸಿಕೊಳ್ಳುವ ಖಯಾಲಿಗೆ ನಾವೆಲ್ಲ ಒಳಗಾಗುತ್ತಿದ್ದೇವೆ.

ಸೌಂದರ್ಯದ ತುಡಿತವೇ ಅಂತಹುದು. ಅಂತರಂಗದ ಸೌಂದರ್ಯ ಮುಖ್ಯ ಎಂದು ಸಾರುತ್ತಲೇ ನಾವೆಲ್ಲ ಬಾಹ್ಯ ಸೌಂದರ್ಯಕ್ಕೆ ಮನಸೋಲುವವರು. ಈ ದೌರ್ಬಲ್ಯ ಉಪಯೋಗಿಸಿಕೊಂಡೇ ಅನೇಕ ಸೌಂದರ್ಯವರ್ಧಕಗಳು ಮಾರುಕಟ್ಟೆಗೆ ಲಗ್ಗೆ ಇಡುತ್ತಿವೆ. ಅದರೊಳಗಿನ ರಾಸಾಯನಿಕಗಳು ನಮ್ಮ ಚರ್ಮಕ್ಕೆ ಹಾನಿಕಾರಕ ಎಂಬ ಅರಿವಿದ್ದರೂ ಅವುಗಳನ್ನು ಉಪಯೋಗಿಸುವ ಜಾಣರು ನಾವು.

ಸೌಂದರ್ಯ ಸಾಧನಗಳ ಉದ್ಯಮ ಅತ್ಯಂತ ವೇಗವಾಗಿ ಬೆಳೆಯಲು ಮತ್ತೊಂದು ಕಾರಣವೆಂದರೆ ನಮ್ಮ ಮನಸ್ಥಿತಿ. ವಯಸ್ಸಾಗುವಂಥ ಸಹಜ ಪ್ರಕ್ರಿಯೆಯನ್ನು ಒಪ್ಪಿಕೊಳ್ಳಲು ನಮ್ಮ ಮನಸ್ಸು ಸಿದ್ಧವಿರುವುದಿಲ್ಲ. ಕೂದಲು ಬಿಳಿಯಾಗುವುದು, ಚರ್ಮ ನಿರಿಗೆಗಟ್ಟುವುದು, ಚರ್ಮ ಕಳೆಗುಂದುವುದು ಇವೆಲ್ಲವೂ ವಯಸ್ಸಾಗುತ್ತಿರುವ ಲಕ್ಷಣಗಳು. ಆದರೆ ಇವೆಲ್ಲವನ್ನೂ ಸಾಧ್ಯವಾದಷ್ಟು ಮುಂದೂಡಲು ನಾವು ಪ್ರಯತ್ನಿಸುತ್ತಲೇ ಇರುತ್ತೇವೆ. ವಯಸ್ಸಾಗುವುದನ್ನು ಮುಂದೂಡುವ ಸಾಧನಗಳ ಜಾಹೀರಾತು ನಮ್ಮ ಮೇಲೆ ಪ್ರಭಾವ ಬೀರಿ ಅವುಗಳನ್ನು ಉಪಯೋಗಿಸಿಯಾದರೂ ಸರಿಯೆ, ನಾವು ಸದಾ ಯೌವನಭರಿತರಾಗಿ ಕಾಣಲು ಬಯಸುತ್ತೇವೆ. ಸಿನಿಮಾತಾರೆಯರ ಮಾಸದ ಸೌಂದರ್ಯ ನೋಡಿ ಅವರಂತೆ ಕಾಣಲು ಪ್ರಯತ್ನಿಸುತ್ತೇವೆ. ಮುಖದ ಮೇಲೆ ಒಂದು ಮೊಡವೆ ಕಂಡರೂ ದಿಗಿಲು ಬೀಳುವ ಈಗಿನ ಯುವಜನತೆಗೆ ಅತಿಯಾದ ಬ್ಯೂಟಿ ಕಾನ್ಷಿಯಸ್ ಇದೆ. ಕೂದಲು, ಚರ್ಮ, ಉಗುರಿನ ಆರೈಕೆಗಾಗಿ ಎಷ್ಟು ಬೇಕಾದರೂ ಹಣ ಸುರಿಯಲು ತಯಾರಾಗುತ್ತಾರೆ.

ಕಾಯ ಕರ್ರನೆ ಕಂದಿಡದೇನು, ಕಾಯ ಮಿರ್ರನೆ ಮಿಂಚಿಡದೇನು, ಅಂತರಂಗ ಶುದ್ಧವಾದಡೆ... ಎಂಬ ಅಕ್ಕನ ವಚನದ ಸಾರ ಈಗಿನ ಆಧುನಿಕ ಯುಗದ ಮಿಥ್ಯವಾಗಿದೆ.

ಈಗ ಏನಿದ್ದರೂ ಬ್ಯೂಟಿ ಪಾರ್ಲರ್‌ಗಳು ಮತ್ತು ಬ್ಯೂಟಿ ಪ್ರಾಡಕ್ಟ್‌ಗಳ ಕಾಲ.

ಪ್ರತಿಕ್ರಿಯಿಸಿ: **feedback@sudha.co.in**